**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**ತಾಂತ್ರಿಕ ಶಿಕ್ಷಣ ಇಲಾಖೆಯ ನಡವಳಿಗಳು**

**ವಿಷಯ:** ಶ್ರೀ ಅರುಣ್‌ಕುಮಾರ್ ಆರ್.ನವಣಿ, ಮೆಕ್ಯಾನಿಕ್(ಕಂಪ್ಯೂಟರ್ ಸೈನ್ಸ್), ಸರ್ಕಾರಿ ಪಾಲಿಟೆಕ್ನಿಕ್, ಮುಧೋಳ ಇವರಿಗೆ ಪೂರ್ವಾನ್ವಯವಾಗಿ ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್(ಕಂಪ್ಯೂಟರ್ ಸೈನ್ಸ್) ಹುದ್ದೆಗೆ ಮುಂಬಡ್ತಿ ನೀಡುವ ಕುರಿತು.

**ಉಲ್ಲೇಖ:** 1.ದಿನಾಂಕ: 29.06.2016 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು
2. ದಿನಾಂಕ: 27.12.2023 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು

*****

ಪ್ರಸ್ತಾವನೆ:

ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಖಾಲಿಯಿದ್ದ ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್(ಕಂಪ್ಯೂಟರ್ ಸೈನ್ಸ್) ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡುವ ಸಂಬಂಧ ದಿನಾಂಕ: 29.06.2016 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯಲ್ಲಿ, ರಾಜ್ಯ ಮಟ್ಟದ ಉಳಿದ ಮೂಲ ವೃಂದದ ಜೇಷ್ಠತಾ ಪಟ್ಟಿಯ ಜೇಷ್ಠತೆ ಸಂಖ್ಯೆ: 13 ರಲ್ಲಿರುವ ಶ್ರೀ ಅರುಣ್‌ಕುಮಾರ್ ಆರ್. ನವಣಿ ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿಯಿದ್ದ ಕಾರಣ ಮುಂಬಡ್ತಿಯನ್ನು ಮೊಹರು ಮಾಡಿದ ಲಕೋಟೆಯಲ್ಲಿಡಲಾಗಿತ್ತು.

ಸರ್ಕಾರದ ಆದೇಶ ಸಂಖ್ಯೆ: ಇಡಿ 85 ಟಿಜಿಎಲ್ 2021, ದಿನಾಂಕ: 08.02.2023 ರಲ್ಲಿ ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ ಸಂಸ್ಥೆಯಲ್ಲಿ Programmable LC Kit ಹಾಗೂ LCD Projector ಕಾಣೆಯಾಗಿದ್ದ ಹಿನ್ನೆಲೆಯಲ್ಲಿ ಶ್ರೀ ಅರುಣ್‌ಕುಮಾರ್ ಆರ್.ನವಣಿ, ಮೆಕ್ಯಾನಿಕ್ ಹಾಗೂ ಇತರರು ಸಂಸ್ಥೆಯ ಉಪಕರಣಗಳ ಸುರಕ್ಷತೆಯ ಬಗ್ಗೆ ಅತ್ಯಂತ ಬೇಜವಾಬ್ದಾರಿ ತೋರಿಸಿ ಕರ್ತವ್ಯಲೋಪವೆಸಗಿರುವ ಆರೋಪಗಳಿಗೆ ಸಂಬಂಧಿಸಿದಂತೆ ಸದರಿಯವರುಗಳ ವಿರುದ್ಧದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲಾಗಿ, ಸದರಿ ಆರೋಪಗಳನ್ನು ಶಿಸ್ತು ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿದೆಯೆಂದು ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಒಪ್ಪಿ, ಸದರಿ ಆಪಾದಿತರುಗಳನ್ನು ಅವರುಗಳ ವಿರುದ್ಧದ ಆರೋಪಗಳಿಂದ ದೋಷಮುಕ್ತರನ್ನಾಗಿಸಿ ಆದೇಶಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಮೆಕ್ಯಾನಿಕ್(ಕಂಪ್ಯೂಟರ್ ಸೈನ್ಸ್) ವೃಂದದಿಂದ ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್(ಕಂಪ್ಯೂಟರ್ ಸೈನ್ಸ್) ವೃಂದಕ್ಕೆ ಮುಂಬಡ್ತಿ ನೀಡುವ ಸಂಬಂಧ ದಿನಾಂಕ: 29.06.2016 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಶ್ರೀ ಅರುಣ್‌ಕುಮಾರ್ ಆರ್. ನವಣಿ ಇವರ ಮುಂಬಡ್ತಿಯನ್ನು ಮುಚ್ಚಿದ ಲಕೋಟೆಯಲ್ಲಿಟ್ಟಿರುವುದನ್ನು ತೆರೆದು, ಕರ್ನಾಟಕ ಸಿವಿಲ್ ಸೇವೆಗಳು (ಬಡ್ತಿ, ವೇತನ ಮತ್ತು ಪಿಂಚಣಿಗಳ ಕ್ರಮಬದ್ಧತೆ) ನಿಯಮಗಳು 1978 ರ ನಿಯಮ 2(1)(ಎ) ರನ್ವಯ ಶ್ರೀ ಅರುಣ್‌ಕುಮಾರ್ ಆರ್. ನವಣಿ, ಮೆಕ್ಯಾನಿಕ್(ಕಂಪ್ಯೂಟರ್ ಸೈನ್ಸ್) ಇವರಿಗಿಂತ ಜೇಷ್ಠತೆಯಲ್ಲಿ ಕಿರಿಯರಾದ ಶ್ರೀಮತಿ ಕವಿತಾ ಹೆಚ್.ಎನ್. ಇವರು ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್(ಕಂಪ್ಯೂಟರ್ ಸೈನ್ಸ್) ಹುದ್ದೆಗೆ ಮುಂಬಡ್ತಿ ಹೊಂದಿದ ದಿನಾಂಕ: 26-09-2016 ರಿಂದ ಪೂರ್ವಾನ್ವಯವಾಗಿ ಅನ್ವಯಿಸುವಂತೆ, ಶ್ರೀ ಅರುಣ್‌ಕುಮಾರ್ ಆರ್. ನವಣಿ, ಮೆಕ್ಯಾನಿಕ್(ಕಂಪ್ಯೂಟರ್ ಸೈನ್ಸ್) ಇವರಿಗೆ ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್(ಕಂಪ್ಯೂಟರ್ ಸೈನ್ಸ್) ಹುದ್ದೆಗೆ ಮುಂಬಡ್ತಿ ನೀಡಲು ದಿನಾಂಕ: 27.12.2023 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ.

...2/-

ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಶ್ರೀ ಅರುಣ್‌ಕುಮಾರ್ ಆರ್.ನವಣಿ, ಮೆಕ್ಯಾನಿಕ್(ಕಂಪ್ಯೂಟರ್ ಸೈನ್ಸ್) ಇವರಿಗೆ ದಿನಾಂಕ: 26.09.2016 ರಿಂದ ಅನ್ವಯಿಸುವಂತೆ ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್ (ಕಂಪ್ಯೂಟರ್ ಸೈನ್ಸ್) ಹುದ್ದೆಗೆ ಬಡ್ತಿ ನೀಡಿ, ಖಾಲಿ ಹುದ್ದೆಗೆ ಸ್ಥಳನಿಯುಕ್ತಿ ಆದೇಶ ಹೊರಡಿಸಬೇಕಾಗಿರುವುದರಿಂದ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: DTE-ADMIOEST(4)/12/2023/** 1159 **ದಿನಾಂಕ: 30.12.2023**

ಶ್ರೀ ಅರುಣ್‌ಕುಮಾರ್ ಆರ್.ನವಣಿ, ಮೆಕ್ಯಾನಿಕ್(ಕಂಪ್ಯೂಟರ್ ಸೈನ್ಸ್), ಸರ್ಕಾರಿ ಪಾಲಿಟೆಕ್ನಿಕ್, ಮುಧೋಳ ಇವರಿಗೆ ಕರ್ನಾಟಕ ಸಿವಿಲ್ ಸೇವೆಗಳು (ಬಡ್ತಿ, ವೇತನ ಮತ್ತು ಪಿಂಚಣಿಗಳ ಕ್ರಮಬದ್ಧತೆ) ನಿಯಮಗಳು 1978 ರ ನಿಯಮ 2(1)(ಎ) ರನ್ವಯ ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್ (ಕಂಪ್ಯೂಟರ್ ಸೈನ್ಸ್) ಹುದ್ದೆಗೆ (2012 ರ ರಾಜ್ಯ ವೇತನ ಶ್ರೇಣಿ ರೂ. 12500-24000 ರಲ್ಲಿ) ದಿನಾಂಕ: 26.09.2016 ರಿಂದ ಪೂರ್ವಾನ್ವಯವಾಗಿ ಅನ್ವಯಿಸುವಂತೆ ಬಡ್ತಿ ನೀಡಿ ಸರ್ಕಾರಿ ಪಾಲಿಟೆಕ್ನಿಕ್, ಮುಧೋಳ ಇಲ್ಲಿನ ಖಾಲಿ ಹುದ್ದೆಗೆ ಎದುರಾಗಿ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

ಮುಂದುವರೆದು, ಸದರಿಯವರಿಗೆ ದಿನಾಂಕ: 26.09.2016 ರಿಂದ ಕಾಲ್ಪನಿಕವಾಗಿ ವೇತನವನ್ನು ನಿಗದಿಪಡಿಸಿ ಆರ್ಥಿಕ ಸೌಲಭ್ಯವನ್ನು ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್ ಹುದ್ದೆಗೆ ಕಾರ್ಯವರದಿ ಮಾಡಿದ ದಿನಾಂಕದಿಂದ ಭವಿಷ್ಯವರ್ತಿಯಾಗಿ ನೀಡುವುದು.

ಆಯುಕ್ತರು 30/12/2023
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಇವರಿಗೆ:-

1. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಮುಧೋಳ(ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ);
2. ಶ್ರೀ ಅರುಣ್‌ಕುಮಾರ್ ಆರ್.ನವಣಿ, ಮೆಕ್ಯಾನಿಕ್(ಕಂಪ್ಯೂಟರ್ ಸೈನ್ಸ್), ಸರ್ಕಾರಿ ಪಾಲಿಟೆಕ್ನಿಕ್, ಮುಧೋಳ (ಪ್ರಾಂಶುಪಾಲರ ಮುಖಾಂತರ);

ಪ್ರತಿ:-

1. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
2. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
3. ಶಾಖಾ ರಕ್ಷಾ ಕಡತ.